OS No.288/2022
Pw1

ದಿನಾಂಕ 26.11.2025 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿ 1 ರವರ ವಿರುದ್ದ ಏಕೆ ದಾವಾ ಹೂಡಿರುತ್ತೀರಿ ಎಂದರೆ ಅವರು ನಮ್ಮ ಸ್ವತ್ತಿಗೆ ತೊಂದರೆ ಕೊಟ್ಟ ಕಾರಣ ಹೂಡಿರುತ್ತೇವೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತು ಮೂಲತಃ ಸರ್ಕಾರದ ಸ್ವತ್ತು ಎಂದರೆ ಸರಿ. ಪ್ರತಿವಾದಿ 2 ರವರ ತಂದೆಯ ಹೆಸರು ಏನು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತನ್ನು ಮನೆಯಿಲ್ಲದವರಿಗೆ ನೀಡಲು ಸರ್ಕಾರದಿಂದ ಅಧಿಸೂಚನೆ ಹೊರಡಿಸಿ ಪ್ರತಿವಾದಿ 1 ರವರಿಗೆ ಹಸ್ತಾಂತರ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮನೆಯಿಲ್ಲದವರಿಗೆ ದಾವಾ ಸ್ವತ್ತನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ದಿನಾಂಕ 11.02.2022 ರಂದು ಡಿ.ಡಿ. ಸಂಖ್ಯೆ 949165 ರಲ್ಲಿ ರೂ.10,000/- ವನು ಪ್ರತಿವಾದಿ 1 ರವರ ಬಳಿ ಡೆಪೋಸಿಟ್ ಮಾಡಿದ್ದು ಪ್ರತಿವಾದಿ 2 ರವರಿಗೆ ದಾವಾ ಸ್ವತ್ತನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ತಂದೆ ದಾವಾ ಸ್ವತ್ತಿನ ಮಾಲೀಕರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರ ವಿರುದ್ದ ದಾವಾ ಹೂಡುವ ಮೊದಲಿಗೆ ಅವರಿಗೆ ನೋಟಿಸ್ ನೀಡಬೇಕಾಗುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತು ನಿಮ್ಮ ತಂದೆಗೆ ಸೇರಿಲ್ಲದೇ ಇರುವ ಕಾರಣ ಅವರಿಗೆ ಮರಣ ಶಾಸನ ಮಾಡುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತಿನ ಸಂಬಂಧ ಯಾವುದೇ ಪರಿಹಾರ ಪಡೆಯಲು ಆರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**

OS No.288/2022
Pw1